# ನೆತ್ತಿಯ ಮೇಲೆ ಸದ್ದಿಲ್ಲದೆ ತೂಗುತ್ತಿತ್ತು ಸಾವು...

ಕೊಲೆ ಎಂದು ತಿಳಿದು ಬೆಚ್ಚಿ ನಿಂತ ಊರು ಸಿದ್ದನ ದೇಹವೆಂದು ತಿಳಿದು ಮಾತು ಬಾರದೆ ಶಬ್ದಕ್ಕಾಗಿ ತಡಕಾಡಿತು, ಕಣ್ಣೀರು ಹಾಕಿತು. ಯಾರೋ ಕೊಲೆಯಾದರೆಂದು ತಿಳಿದ ಸಿದ್ದನ ಹೆಂಡತಿಗೆ ಕೊಲೆಯಾಗಿರುವುದು ತನ್ನ ಗಂಡನೇ ಎಂದು ತಿಳಿದ ಮೇಲೆ ಬೀದಿಯಲ್ಲಿ ಬಿದ್ದು ಹೊರಳಾಡತೊಡಗಿದಳು. ಅವಳ ಬಾಳಿನಲ್ಲಿ ದಿಕ್ಕಾಗಬೇಕಾಗಿದ್ದ ಸಿದ್ದ ಇಲ್ಲದ ಸುದ್ದಿ ಕೇಳಿ ಕತ್ತಲಾವರಿಸಿದಂತಾಗಿ ಅವಳಿಗೆ ತಾನೇನು ಮಾಡುತ್ತಿದ್ದೇನೆ ಎನ್ನುವ ಪರಿವೆಯೇ ಇದ್ದಂತೆ ಕಾಣಲಿಲ್ಲ. ಇದಾವುದನ್ನೂ ಅರಿಯದ ಸಿದ್ದನ ಮಗ ಬೆರಳು ಚೀಪುತ್ತಾ ಸುತ್ತುವರಿದ ಜನರನ್ನ ಪಿಳಿಪಿಳಿ ನೋಡುತ್ತಿದ್ದ. ಅವಳ ರೋದನದ ದೃಶ್ಯ ಊರ ಜನರ ಹೃದಯವನ್ನು ಕಲಕಿತ್ತು. ಅವಳ ಮನಸ್ಸಿಗೆ ತಿಳಿಹೇಳಲು ಅಲ್ಲಿ ಯಾರ ಮನಸೂ ತಿಳಿಯಾಗಿರಲಿಲ್ಲ.

ಗಂಡ ಇನ್ನಿಲ್ಲದ ಸುದ್ದಿ ಕೇಳಿ ಒದ್ದಾಡುತ್ತಿದ್ದ ಸಿದ್ದನ ಹೆಂಡತಿ ದ್ಯಾವಕ್ಕ 'ಈಗ ಬತ್ತೀನಿ ಅಂತ ಹೋದವನು ಹೆಣವಾಗಿ ಬಂದವನಲ್ಲಪ್ಪೋ, ದಿನಾ ದೇವರಿಗೆ ಕಡ್ಡಿ ಹಚ್ಚುತ್ತಿದ್ಯಲ್ಲಪ್ಪೋ, ಯಾವ ದೇವರೂ ನಿನ್ನನ್ನು ಕಾಪಾಡಲಿಲ್ವಲ್ಲಪ್ಪೋ, ಯಾವ ಕಟುಕ ನನ್ಮಕ್ಳು ನಿನ್ನ ಈ ಮಟ್ಟಿಗೆ ಕೊಲೆ ಮಾಡಿದ್ರಪ್ಪೋ' ಎಂದು ರೋದಿಸುತ್ತಿದ್ದಳು. ಸಿದ್ದನ ಹೆಂಡತಿಯ ಹೊಟ್ಟೆಯಲ್ಲೀಗ ಒಂದಲ್ಲ ಎರಡಲ್ಲ ಹತ್ತು ಹಲವು ಕೆಂಡಗಳು. ಹೆಂಗಳೆಯರ ಸೆರಗು ತೊಯ್ದಿತು. ದುಃಖ ಒದ್ದೆಯಾಗಿ ಅಂಗಳದ ಮಣ್ಣು ನೆನೆದು ಊರಿಗೆ ಹರಿಯಿತು.

ಆ ಮೂಟೆ ಸಿಕ್ಕಿದ ಜಾಗದ ಮಾಲೀಕ ಕರಿಸಿದ್ದ, ಅವನ ಮಗ, ಆ ಮನೆಯ ಆಳು ಶಿವರುದ್ರ ಎಲ್ಲರನ್ನೂ ಪೊಲೀಸಿನವರು ಗುರುತು ಹಚ್ಚಿಕೊಂಡರು. ಸಿದ್ದನ ಹೆಂಡತಿಯ ಸಾಕ್ಷಿ ಕೇಳಿದರು. ಸಿದ್ದನ ಹೆಂಡತಿ ಮಧ್ಯ ಮಧ್ಯ ಅಳುತ್ತಿದ್ದರಿಂದ ಸಿಟ್ಟಿಗೆದ್ದ ಪೊಲೀಸರು ಗದರಿಸಿದರು. ಹೆದರಿ ಬೆಪ್ಪಾಗಿ ಏನೇನೋ ಕನವರಿಸಿದಂತೆ ಕುಂತಲ್ಲಿಂದಲೇ ದೂಳು ತೂರುತ್ತಾ ಕೊಲೆ ಮಾಡಿದವರ ಮನೆ ನನ್ನ ಹೊಟ್ಟೆ ಉರಿದಂಗೆ ಉರಿದೋಗ್ಲಪ್ಪಾ ಅನ್ನುತ್ತಾ ತನ್ನ ಮೈಮೇಲೆ ದೂಳು ಎಸೆದುಕೊಳ್ಳುತ್ತಿದ್ದಳು. ಕೊಂದವರಿಗೆ ಹಿಡಿಶಾಪ ಹಾಕುತ್ತಿದ್ದಳು.

'ಎಷ್ಟು ದಿನ ಆಯ್ತು ನಿನ್ನ ಗಂಡ ಮನೆ ಬಿಟ್ಟು? ನಿನಗೂ ನಿನ್ನ ಗಂಡನಿಗೂ ಆಗಾಗ ಜಗಳ ನಡೆಯುತ್ತಿತ್ತ?' ಎಂದು ಕೇಳಿದರು. ಅವಳು ಏನನ್ನೂ ಬಾಯಿ ಬಿಡದಿದ್ದಾಗ ಊರಿನ ಮುಖಂಡ ಗವಿರಂಗಣ್ಣ, ಬಸಪ್ಪ, ಬುಡ್ಡಯ್ಯ ಪೊಲೀಸರ ಮುಂದೆಯೇ ನಿಂತಿದ್ದವರು, ಗಂಡ ಹೆಂಡತಿ ಅನ್ಯೋನ್ಯವಾಗಿದ್ದರು ಎಂದು ಹೇಳಲು ಎರಡೆಜ್ಜೆ ಮುಂದೆ

